**ದಿನಾಂಕಃ 14.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್ ಎಮ್ ಆರ್ ರವರಿಂದಃ**

ನನ್ನ ತಾತನ ಹೆಸರು ರಾಮಯ್ಯ, ಅವರು ಕೂಲಿ ಕೆಲಸ ಮಾಡುತ್ತಿದ್ದು ಅವರಿಗೆ 5 ಜನ ಮಕ್ಕಳು. ಅವರು ಮೂಲತಃ ಆನೂರು ನವರಾಗಿರುತ್ತಾರೆ. ಅವರು ಶಿವುಪುರಕ್ಕೆ ಬಂದು ಎಷ್ಟು ವರ್ಷ ವಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ನನ್ನ ತಾಯಿಯು ದೊಡ್ಡಮಗಳಾಗಿದ್ದು ಅವರಿಗೆ ಯಾವುದೇ ಭಾಗವನ್ನು ಕೊಟ್ಟಿರುವುದಿಲ್ಲವೆಂದು ಈ ಪ್ರಕರಣವನ್ನು ಹೂಡಿರುತ್ತೇನೆ. ಸರ್ವೇ ನಂ.9/1 22 ಗುಂಟೆಗೆ ಹಾಗೂ ಸರ್ವೇ ನಂ.7/2 ಮತ್ತು 7/3 ರಲ್ಲಿ 10 ಗುಂಟೆ ಜಾಗಕ್ಕೆ ಸಂಬಂಧಿಸಿದಂತೆ ಹೂಡಲಾಗಿರುತ್ತದೆ. ಪಹಣಿ ಹಾಗೂ ಮ್ಯುಟೇಷನ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡಿರುತ್ತೇನೆ.

3 ನೇ ಪ್ರತಿವಾದಿಯ ನ್ಯಾಯಾಲಯಕ್ಕೆ ಸಲ್ಲಿಸಿದ ತಕರಾರಿನ ಬಗ್ಗೆ ತಿಳಿದುಕೊಂಡಿರುತ್ತೇನೆ. ಸರ್ವೇ ನಂ.9/1 ಮೂಲತಃ ಯಾರಿಗೆ ಸೇರಿದ್ದಾಗಿರುತ್ತದೆಂದು ಗೊತ್ತಿರುವುದಿಲ್ಲ. ಸರ್ವೇ ನಂ.9/1 ರಲ್ಲಿ 2 ಗುಂಟೆ ಪಿಳ್ಳಮ್ಮ ರವರ ಹೆಸರಿನಲ್ಲಿ, 2 ಮತ್ತು 14 ಗುಂಟೆ ರಾಮಚಂದ್ರನವರ ಹೆಸರಿನಲ್ಲಿ, ಸರಸಮ್ಮ, ಅನ್ನಪೂರ್ಣಮ್ಮ ಮತ್ತು ಪ್ರಮೀಳಾ ರವರ ಹೆಸರಿನಲ್ಲಿ ತಲಾ 2 ಗುಂಟೆ ಇರುತ್ತದೆ. ಅವರ ಹೆಸರಿನಲ್ಲಿ ಯಾವಾಗ ಪಹಣಿ ಬಂದಿರುತ್ತದೆ ಎಂದು ಗೊತ್ತಿರುವುದಿಲ್ಲ. ಪಂಚಾಯತ್ ಪಾರಿಕತ್ ಆದ ನಂತರ ಅವರ ಹೆಸರಿನಲ್ಲಿ ಸ್ವತ್ತುಗಳು ದಾಖಲಾಗಿರುತ್ತವೆಂದರೆ ಗೊತ್ತಿರುವುದಿಲ್ಲ.

ನನ್ನ ತಾತನಿಗೆ ಅವರ ತಂದೆಯಿಂದ ಎಷ್ಟು ಆಸ್ತಿಗಳು ಬಂದಿರುತ್ತವೆಂದು ಗೊತ್ತಿರುವುದಿಲ್ಲ. ನನ್ನ ತಾಯಿಯೂ ದಿ.30.01.2004 ರಲ್ಲಿ ತೀರಿಕೊಂಡಿರುತ್ತಾರೆ. ಅವರ ಜೀವಿತಾವಧಿಯಲ್ಲಿ ಪಾಲನ್ನು ಮಾಡಬೇಕೆಂದು ಬೇಡಿಕೆ ಇಟ್ಟಿದ್ದರು, ಆದರೆ ನಿಖರವಾಗಿ ಯಾವ ವರ್ಷದಲ್ಲಿ ಕೇಳಿರುತ್ತಾರೆಂದು ಗೊತ್ತಿರುವುದಿಲ್ಲ. ನಾನು ಇನ್ನೂ ಚಿಕ್ಕವಯಸ್ಸಿ ನಲ್ಲಿ ಇದ್ದಾಗಲೇ ಭಾಗ ಕೇಳಿರುವ ವಿಷಯವನ್ನು ನನ್ನ ತಾಯಿ ನನಗೆ ತಿಳಿಸಿರುತ್ತಾರೆ.

ನಾನು ಆನೇಕಲ್ಲ ತಾಲ್ಲೂಕಿನಲ್ಲಿ ವಾಸಿಸುತ್ತೇನೆ. ನನ್ನ ತಾಯಿಗೆ ನಾವು ಒಟ್ಟು 6 ಜನ ಮಕ್ಕಳು 6 ಜನ ಮಕ್ಕಳು, ನಾವೆಲ್ಲರೂ ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆಂದರೆ ಸರಿ. ನನ್ನ ತಾತ ನ ಮಕ್ಕಳೂ ಸಹ ಪ್ರತ್ಯೇಕವಾಗಿ ವಾಸಿಸುತ್ತಾರೆ ಹಾಗೂ ಅವರು ಪ್ರತ್ಯೇಕ ಪಡಿತರ ಚೀಟಿ ಹೊಂದಿರುತ್ತಾರೆಂದರೆ ಸರಿ.

ಪ್ರಕರಣ ಹೂಡಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. 1 ನೇ ವಾದಿಯ ಪರವಾಗಿಯೂ ಸಹ ನಾನೇ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿ. ಅದಕ್ಕೆ ಅವರ ಕಡೆಯಿಂದ ಪರವಾನಿಗೆಯನ್ನು ಪಡೆದಿರುತ್ತೇನೆ.

ನಾವು ಜಿಂಟಿ ಕುಟುಂಬದಲ್ಲಿ ಇದ್ದೇವೆಂದು ತೋರಿಸಲು ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೀರಿ ಎಂದರೆ ಮದುವೆಯ ನಂತರ ಬೇರೆ ಬೇರೆ ಮನೆಗ ಹೋಗಿರುತ್ತೇವೆ. ನನ್ನ ತಾಯಿಗೆ ಯಾವಾಗ ಮದುವೆಯಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. 6 ನೇ ಪ್ರತಿವಾದಿಯ ಜೊತೆ ಅನ್ಯೋನ್ಯವಾಗಿದ್ದು ಉಳಿದವರ ಜೊತೆ ಸಂಬಂಧ ಸರಿಯಾಗಿಲ್ಲ. ನನ್ನ ಸಾಕ್ಷ ಪ್ರಮಾಣಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ.

ದಾವಾಸ್ವತ್ತಿನ ಜಿಂಟ ಸ್ವಾಧೀನದಲ್ಲಿ ನಾವು ಇರುವುದಿಲ್ಲವೆಂದರೆ ನನ್ನ ತಾಯಿ ಬದುಕಿದ್ದ ಕಾಲಕ್ಕ ಇದ್ದಿರುತ್ತೇವೆ. ನಾವು ಜಂಟಿ ಸ್ವಾ ಧೀನದಲ್ಲಿದ್ದೇವೆಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

ಸರ್ವೇ ನಂ.9/1 ರ ಚೆಕ್ಕು ಬಂದಿ ಪೂರ್ವಕ್ಕೆ ವೇಣುಗೋಪಾಲ, ಪಶ್ಚಿಮಕ್ಕೆ ಮುನಿವೆಂಕಟಪ್ಪ, ಉತ್ತರಕ್ಕೆ ನಾಗಪ್ಪ ಮತ್ತು ದಕ್ಷಿಣಕ್ಕೆ ಕೆರೆಗೌಡ ಇರುತ್ತಾರೆ. ಸರ್ವೇ ನಂ.7/2 ಮತ್ತು 7/3 ರ ಚೆಕ್ಕು ಬಂದಿ ಪೂರ್ವಕ್ಕೆ ಕೆರೆಯ ಏರಿ, ಪಶ್ಚಿಮಕ್ಕೆ ಕೆರೆಗೌಡ, ಉತ್ತರಕ್ಕೆ ನಾಗಪ್ಪ ಮತ್ತು ವೆಂಕಟೇಶ್ ಹಾಗೂ ದಕ್ಷಿಣಕ್ಕೆ ವೇಣುಗೋಪಾಲ ಇರುತ್ತಾರೆ. 3 ನೇ ದಾವಾಸ್ವತ್ತಾದ ಖಾನೇಷು ಮಾರಿ ಸಂಖ್ಯೆ 13 ಮತ್ತು 14 ರ 32 ಗುಂಟೆ ವಿಸ್ತೀರ್ಣ ಇರುತ್ತದೆ. ಅದರ ಚೆಕ್ಕು ಬಂದಿ ಪೂರ್ವಕ್ಕೆ ಕೆರಯ ಏರಿ, ಪಶ್ಚಿಮಕ್ಕೆ ಗುರಪ್ಪ, ಉತ್ತರಕ್ಕೆ ನಾಗಪ್ಪ ಮತ್ತು ವೆಂಕಟೇಶ್ ಹಾಗೂ ದಕ್ಷಿಣಕ್ಕೆ ವೇಣುಗೋಪಾಲ ಇರುತ್ತಾರೆ. 4 ನೇ ದಾವಾಸ್ವತ್ತಾದ ಖಾನೇಷು ಮಾರಿ ಸಂಖ್ಯೆ 45 ರ ವಿಸ್ತೀರ್ಣ ಹಾಗೂ ಚೆಕ್ಕು ಬಂದಿ ಗೊತ್ತಿರುವುದಿಲ್ಲ. 5 ನೇ ದಾವಾಸ್ವತ್ತಾದ ಖಾತಾ ಸಂಖ್ಯೆ 63/1 ರ ವಿಸ್ತೀರ್ಣ ಹಾಗೂ ಚೆಕ್ಕು ಬಂದಿ ಗೊತ್ತಿರುವುದಿಲ್ಲ.

ನನ್ನ ತಾತನ ತಂದೆಯ ಹೆಸರು ವೆಂಕಟಪ್ಪ, ಅವರಿಗೆ ನಂಜಪ್ಪ ಮತ್ತು ರಾಮಯ್ಯ ಎಂಬ ಮಕ್ಕಳಿರುವ ಬಗ್ಗೆ ಗೊತ್ತಿರುತ್ತದೆ. ನನ್ನ ತಾತ ಯಾವಾಗ ತೀರಿಕೊಂಡಿರುತ್ತಾರೆಂದು ಗೊತ್ತಿರುವುದಿಲ್ಲ. ನ್ಯಾಯಾಲಯಕ್ಕೆ ಹಾಜರುಮಾಡಿದ ವಂಶವೃಕ್ಷಕ್ಕೆ 1 ನೇ ವಾದಿಯು ಮಾಹಿತಿ ನೀಡಿರುತ್ತಾರೆ. ನನ್ನ ತಾಯಿ ಬದುಕಿದ್ದ ಕಾಲಕ್ಕೆ ನನ್ನ ತಾಯಿಯ ಮನೆಯಲ್ಲಿ ಇರಲಿಲ್ಲ, ಗಂಡನ ಮನೆಯಲ್ಲಿ ಇದ್ದು ಆಗಾಗ ತಾಯಿಯ ಮನೆಗೆ ಹೋಗಿ ಬಂದು ಮಾಡುತ್ತಿದ್ದೆ.

ದಾವಾಸ್ವತ್ತು 1 ರಿಂದ 5 ಯಾವ ರೀತಿಯಲ್ಲಿ ಬಂದಿರುತ್ತದೆ ಎಂದು ಹೇಳಲಾಗುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**